ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ — ೧೯

ಸಂಪುಟ ೧ ಸಂಚಿಕೆ ೩೨ ಕೊಪ್ಪ ೩-೪-೮೩ ಭಾನುವಾರ ಬೆಲೆ ೨೦ ಪೈಸೆ

ಮೇಲ್ಪಾಲು ಕರ್ಣಾಟಕ ಬ್ಯಾಂಕ್ ಶಾಖೆಯಿಂದ ಸಾಲ ವಿತರಣೆ

ಮೇಲ್ಪಾಲು: ಇಲ್ಲಿನ ಕರ್ಣಾಟಕ ಬ್ಯಾಂಕ ಶಾಖೆ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿ ಮಾರ್ಚ್ ತಿಂಗಳ [illegible] ಸಾಲ್ಕು ಜೊತೆ ಎತ್ತು-ಗಾಡಿಗೆ ಸಾಲ ವಿತರಣೆ ಮಾಡಿದೆ. ಈ ಶಾಖೆ ಈವರೆಗೆ ಐದು ಹು[illegible]ರ [illegible] ಸೇರಿದಂತೆ [illegible] ಜನ ದುರ್ಬಲ ವರ್ಗದವರಿಗೆ ಸಾಲ ನೀಡಿರುವುದಾಗಿ ಶಾಖೆಯ ಮ್ಯಾನೇಜರ್ ಎ. ರಾಘವಾಚಾರ್ ತಿಳಿಸಿದ್ದಾರೆ.

ಬೇಗಾರು ವೈದ್ಯರ ಪ್ರ[illegible] ಸಿ.ಓ.ಡಿ. ತನಿಖೆಗೆ

ಕೊಪ್ಪ: [illegible] ನಗರ ಶಾಸಕ [illegible] ಗಮನ ಸೆಳೆಯುವ [illegible] ಪ್ರಸ್ತಾಪವಾದ ಬೇಗಾರು ಸರ್ಕಾ[illegible] ಡಾ|ಎ.ಜಿ. ಹೆಗ್ಡೆ ಪ್ರಕರಣವನ್ನು ಸರ್ಕಾರ ಸಿ.ಓ.ಡಿ. ತನಿಖೆಗೆ ಒಪ್ಪಿಸಿರುವುದಾಗಿ ವರದಿಯಾಗಿದೆ.

ಆರ್ಥಿಕ ಸಮೀಕ್ಷಾ ಸಮ್ಮೇಳನಕ್ಕೆ ಗೋವಿಂದ ಗೌಡರ ನೇಮಕ

ಕೊಪ್ಪ: ದೆಹಲಿಯಲ್ಲಿ ಏ. ೨೪ ರಿಂದ ನಡೆಯುವ ಅಖಿಲ ಭಾರತ ಆರ್ಥಿಕ ಸಮೀಕ್ಷಾ ಸಮ್ಮೇಳನದಲ್ಲಿ ಭಾಗವಹಿಸಲು ನಮ್ಮ ಕ್ಷೇತ್ರದ ಶಾಸಕರಾದ ಗೋವಿಂದ ಗೌಡರು (ಇನ್ನೊಬ್ಬರು ವಿರೋಧಪಕ್ಷದ ಗೋವಿಂದ ಸಿ. ಒಡೆಯರಾಜ್) ಆಯ್ಕೆಯಾಗಿದ್ದು, ಅವರು ಏ. ೨೧ರಂದು ಬೆಂಗಳೂರಿನಿಂದ ವಿಮಾನದಲ್ಲಿ ದೆಹಲಿಗೆ ತೆರಳಲಿದ್ದಾರೆ.

ಶೃಂಗೇರಿ-ಹಾಸನ ಬಸ್ ಹಗರಣ: ಬಾಳೆಹೊನ್ನೂರಲ್ಲಿ

ರಸ್ತೆ ತಡೆ ಚಳುವಳಿ

ಬಾಳೆಹೊನ್ನೂರು: ಶೃಂಗೇರಿ-ಹಾಸನ ಸರ್ಕಾರಿ ಎಕ್ಸ್‌ಪ್ರೆಸ್ ಬಸ್ಸಿನ ವೇಳೆಯನ್ನು ಸೂಕ್ತವಾಗಿ ಬದಲಿಸಬೇಕು ಹಾಗೂ ಅದರ ರಹದಾರಿಯನ್ನು ಖಾಯಂಗೊಳಿಸಬೇಕು ಎಂದು ಒತ್ತಾಯಿಸಿ ಇಲ್ಲಿ ಮಾ. ೨೭ ರಂದು ಶಾಂತಿಯುತ ರಸ್ತೆ ತಡೆ ಚಳುವಳಿ ನಡೆಯಿತು.

ಚಳುವಳಿಯ ಮುಖಂಡತ್ವವನ್ನು "ರಸ್ತೆ ಬಳಕೆದಾರರ ವೇದಿಕೆ"ಯ ಸಂಚಾಲಕ ಎಸ್. ಎನ್. ಭಟ್ ಮತ್ತು ಭಾಜಪಾ ಜಿಲ್ಲಾ ಕಾರ್ಯದರ್ಶಿ ವಿಠಲರಾವ್ ವಹಿಸಿದ್ದರು. ಶೃಂಗೇರಿ-ಆಲ್ದೂರು ನಡುವಿನ ಸಾವಿರಾರು ಹಳ್ಳಿಗಳ ಜನರಿಗೆ ಜಿಲ್ಲಾ ಕೇಂದ್ರ ತಲುಪಲು ಅತ್ಯಂತ ಅನುಕೂಲಕರವಾಗಿದ್ದ ಈ ಬಸ್ಸಿನ ವೇಳೆ ಬದಲಿಸುವಲ್ಲಿ ಹಾಗೂ ಅದರ ಖಾಯಂ ರಹದಾರಿಗೆ ರ. ಸಾ. ಸಂಸ್ಥೆ ಅರ್ಜಿ ಹಾಕದಿರುವಲ್ಲಿ ರಸ್ತೆ ಸಾರಿಗೆ ಸಂಸ್ಥೆ ಮತ್ತು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಶಂಕರ್ ಕಂಪನಿಯೊಂದಿಗೆ ಶಾಮೀಲಾಗಿರುವುದಾಗಿ ಚಳುವಳಿ ಮುಖಂಡರು ಆಪಾದಿಸಿದರು.

ಶಂಕರ್ ಕಂಪನಿ ನಿಲುವು

ಸರ್ಕಾರಿ ಬಸ್ಸು ಅಧಿಕೃತ ನಿಲುಗಡೆಗಳಲ್ಲದೆ ಎಲ್ಲಾ ಕಡೆಗಳಲ್ಲೂ ನಿಲ್ಲುವುದರಿಂದ ತಮ್ಮ ಸಂಸ್ಥೆಯ ಹಿತಾಸಕ್ತಿಗೆ ಧಕ್ಕೆ ಬರುವುದರಿಂದ ಅದರ ಓಡಾಟಕ್ಕೆ ತಕರಾರು ಅಹವಾಲು ಸಲ್ಲಿಸುವುದು ತಮ್ಮ ಸಂಸ್ಥೆಯ ಹಕ್ಕು ಎಂದು ಪ್ರತಿಪಾದಿಸಿದ ಶಂಕರ್ ಕಂಪೆನಿ ತಾಂತ್ರಿಕ ನಿರ್ದೇಶಕ ಎ. ಮನೋಹರರಾವ್, ಅಧಿಕಾರಿಗಳೊಂದಿಗೆ ಶಾಮೀಲಿನ ಆರೋಪ ನಿರಾಕರಿಸಿದರು. ತಮ್ಮ ಅಹವಾಲು ಪರಿಶೀಲಿಸಿ, ಸಾರಿಗೆ ಸಂಸ್ಥೆಯ ಒಪ್ಪಿಗೆ ಪಡೆದೇ ಅಪೆಲೇಟ್ ಟ್ರಿಬ್ಯೂನಲ್ ಬಸ್ಸಿನ ವೇಳೆ ಬದಲಿಸುವ ತೀರ್ಪು ನೀಡಿದೆಯೆಂದ ಅವರು, ರ. ಸಾ. ಸಂಸ್ಥೆ ಅರ್ಜಿ ಹಾಕದಿದ್ದುದು ರಹದಾರಿ ಖಾಯಂ ತಡವಾಗಲು ಕಾರಣವೆಂದು 'ಮುಂಜಾವು'ಗೆ ತಿಳಿಸಿದರು.

"ಮನಃಶಾಂತಿಗೆ ಆಧ್ಯಾತ್ಮಿಕತೆ ಅಗತ್ಯ" ಹರಿಹರಪುರದ ಗುರುಗಳು

(ನಮ್ಮ ಪ್ರತಿನಿಧಿಯಿಂದ)

ಉತ್ತಮೇಶ್ವರ: ಇಲ್ಲಿಗೆ ಸಮೀಪದ ಪುರಾತನ ಶಿವ[illegible] ದೇವಸ್ಥಾನದಲ್ಲಿ ಅಷ್ಟಬಂಧ [illegible] ಕುಂಭಾಭಿಷೇಕ ಮಹೋತ್ಸವ ಮಾ. [illegible]ರಿಂದ [illegible] ನಡೆಯಿತು. [illegible] ನಡೆದ ಧಾರ್ಮಿಕ ಸಭೆಯಲ್ಲಿ ಹರಿಹರಪುರದ ಗುರುಗಳ [illegible] ಮನಃಶಾಂತಿಗೆ [illegible] ಸಮಾರಂಭದಲ್ಲಿ ಭಾಗವಹಿಸಿದ್ದ ಜಿಲ್ಲಾಧಿಕಾರಿಗಳು ದೇವಸ್ಥಾನಗಳಿಗೆ ತಸ್ತೀಕ್, ನೌಕರ ಇತ್ಯಾದಿ ತಮ್ಮ ಕರ್ತವ್ಯ ವ್ಯಾಪ್ತಿಗೆ ಮೀರಿದ್ದಾದರೂ ಆ ಬಗ್ಗೆ ಸರ್ಕಾರಕ್ಕೆ ಸೂಕ್ತ ಶಿಫಾರಸು ಮಾಡುವ ಹಾಗೂ, ಕೊಪ್ಪ ತಾ||ಗೆ ಮಂಜೂರಾಗಿರುವ [illegible] ಲಕ್ಷ ರೂ. ಗಳನ್ನು ಕೂಡಲೇ ಬಿಡುಗಡೆ ಮಾಡಿಸುವ ಭರವಸೆ ಕೊಟ್ಟರು. ಸಾವಿರಾರು ಜನ ಭಕ್ತಾದಿಗಳು ಭಾಗವಹಿಸಿದ್ದರು.

ಓದುಗರಲ್ಲಿ—

ಮುದ್ರಣದ ಸಮಸ್ಯೆಯಿಂದಾಗಿ ಈ ಸಲ ಪತ್ರಿಕೆ ತಡವಾಗಿ ಎರಡೇ ಪುಟದಲ್ಲಿ ಪ್ರಕಟವಾಗಿದೆ. ಇನ್ನು ಒಂದೆರಡು ವಾರ ಹೀಗೇ ಸಹಕರಿಸಿ. — ಸಂಪಾದಕ.

ಅತ್ತಿಕುಡಿಗೆ ಸ|| ಸಂಘದಿಂದ ಜಪ್ತಿ ಅಡಿಕೆ ವಾಪಸು

ಬಿಳಲುಕೊಪ್ಪ: ಅತ್ತಿಕುಡಿಗೆ ವ್ಯವಸಾಯ ಸೇವಾ ಸಹಕಾರ ಸಂಘದ ವತಿಯಿಂದ ಕಳೆದ ಡಿಸೆಂಬರಿನಲ್ಲಿ ಜಪ್ತಿ ಮಾಡಲಾಗಿದ್ದ ನಾರಾಯಣ ಮೂರ್ತಿ, ರಾಮಚಂದ್ರ ಆಚಾರ್ ಮತ್ತು ತಿಮ್ಮಪ್ಪಾಚಾರ್ ಎಂಬ ರೈತರ ಅಡಿಕೆಯನ್ನು ಈಚೆಗೆ ಬಿಟ್ಟುಕೊಡಲಾಯಿತು.

ಕಪಿಲಾ ಅಣೆಕಟ್ಟಿನಿಂದ ಕಾಫಿತೋಟಕ್ಕೆ ನೀರೆತ್ತುತ್ತಿದ್ದ

ಪಂಪ್‌ಸೆಟ್ ವಶ, ಬೀಗಮುದ್ರೆ

ಕುದುರೆಗುಂಡಿ: ಇಲ್ಲಿಗೆ ಸಮೀಪದ ಕಪಿಲಾ ಹಳ್ಳದ ಅಣೆಕಟ್ಟಿನಿಂದ ಅನಧಿಕೃತವಾಗಿ ವಿದ್ಯುಚ್ಚಾಲಿತ ಪಂಪ್‌ಸೆಟ್ಟಿನಿಂದ ನೀರೆತ್ತುತ್ತಿದ್ದ ಕೆ. ವಿ. ಅಜಿಲ ಮತ್ತು ಶ್ರೀಮತಿ ಪಾರ್ವತಮ್ಮ ಎಂಬವರ ಪಂಪ್‌ಸೆಟ್‌ಗಳನ್ನು ಲೋಕೋಪಯೋಗಿ ಇಲಾಖೆ ವಶಪಡಿಸಿಕೊಂಡು, ಪಂಪಿನ ಮನೆಗಳಿಗೆ ಬೀಗಮುದ್ರೆ ಹಾಕಿದೆ.

ಹೀಗೆ ನೀರೆತ್ತುವುದರಿಂದ ತಮ್ಮ ಬಾಗಾಯ್ತು ಜಮೀನಿಗೆ ಬಾಧಕವೆಂದು ಅಧಿಕೃತ ಅಚ್ಚುಕಟ್ಟುದಾರರು ನೀಡಿದ ದೂರಿನ ಮೇರೆಗೆ, ಪೋಲೀಸರ ನೆರವಿನಿಂದ ಸ||ಕಾ|| ಇಂ|| ಕೆ. ವಿ. ವೆಂಕಟಯ್ಯ ಈ ಕ್ರಮ ತೆಗೆದುಕೊಂಡಿದ್ದಾರೆಂದು ತಿಳಿದುಬಂದಿದೆ.

ಚಿನ್ನದ ನಾಣ್ಯ

ಕೊಪ್ಪ: ಕುದುರೆಗುಂಡಿ ಬಳಿಯ ಆರ್ಬಕ್ ಎಸ್ಟೇಟ್‌ನಲ್ಲಿ ನೆಲ ಅಗೆಯುತ್ತಿದ್ದಾಗ ಮಾ. ೨೬ ರಂದು ಸುಮಾರು ೫ ಸಾವಿರ ರೂ. ಮೌಲ್ಯದ ೯ ಬಂಗಾರದ ನಾಣ್ಯಗಳು ದೊರೆತಿವೆ. ಪ್ರಾಚೀನವೆಂದು ಕಾಣುವ ಇವನ್ನು ಕೊಪ್ಪ ರಾಜಸ್ವಾಧಿಕಾರಿಗಳು ವಶಕ್ಕೆ ತೆಗೆದುಕೊಂಡು ಮುಂದಿನ ಕ್ರಮಕ್ಕಾಗಿ ಜಿಲ್ಲಾಧಿಕಾರಿಗಳಿಗೆ ರವಾನಿಸಿದ್ದಾರೆ.

> **ಶೃಂಗೇರಿ ಬಳಿಯೆಲ್ಲೂ?**
>
> ಶೃಂಗೇರಿಯ ಸಮೀಪ ಎಲ್ಲೋ ಒಂದೆಡೆ ಚಿನ್ನದ ನಾಣ್ಯಗಳು ದೊರೆತಿವೆಯೆಂದೂ, ಸಿಕ್ಕಿದವರು ಅದರೊಂದಿಗೆ ತಲೆ ಮರೆಸಿಕೊಂಡಿದ್ದಾರೆಂದೂ ಗುಸುಗುಸು ಹರಡಿದೆ. ಪೋಲೀಸರಿಗೆ ಈ ಬಗ್ಗೆ ಇನ್ನೂ ಸುಳಿವು ಸಿಕ್ಕಿಲ್ಲವೆಂದು ತಿಳಿದು ಬಂದಿದೆ.

ಶೃಂಗೇರಿ ತಾಲ್ಲೂಕಿಗೆ "ಮಂಗನ ಕಾಯಿಲೆ ಹರಡಿಲ್ಲ"

ಶೃಂಗೇರಿ: ಈ ತಾಲ್ಲೂಕಿನ ಮೀಗ ಮತ್ತು ವರ್ಕಲ್ ಗ್ರಾಮದ ಕೆಲವೆಡೆ ಮಂಗಗಳು ಸತ್ತಿವೆಯೆಂದೂ, ಮಂಗನ ಕಾಯಿಲೆ ಹರಡಿದೆಯೆಂದೂ ಹಬ್ಬಿದ್ದ ವದಂತಿಗಳು ನಿರಾಧಾರವೆಂದು ಜಿಲ್ಲಾ ಸಹಾಯಕ ವೈದ್ಯಾಧಿಕಾರಿ ಡಾ||ಬೇವನೂರ್ ಮತ್ತು ತಂಡ ಏ. ೩ರಂದು ಆ ಪ್ರದೇಶದಲ್ಲಿ ನಡೆಸಿದ ವ್ಯಾಪಕ ತನಿಖೆಯಿಂದ ಸ್ಥಿರಪಟ್ಟಿದೆ. ಆ ಪ್ರದೇಶದಲ್ಲಿ ಕಾಯಿಲೆ ಬಗ್ಗೆ ಮುಂಜಾಗ್ರತೆ ತಿಳುವಳಿಕೆಗಳನ್ನು ರೈತರಿಗೂ ಆರೋಗ್ಯ ಸಿಬ್ಬಂದಿಗೂ ನೀಡಲಾಗಿದೆ.

ತಾ||ರೈತಸಂಘದ ಅಧ್ಯಕ್ಷರಾಗಿ ಮಳಿಗೆ ಚಂದ್ರಶೇಖರ್ ಪುನರಾಯ್ಕೆ

ಕೊಪ್ಪ: ಇಲ್ಲಿನ ಪುರಭವನದಲ್ಲಿ ಮಾ. ೨೫ರಂದು ಸುಮಾರು ೫೦೦ ಜನ ರೈತರು ಸೇರಿದ್ದ ತಾ||ರೈತ ಸಂಘದ ಸರ್ವಸದಸ್ಯರ ಸಭೆಯಲ್ಲಿ ಮಳಿಗೆ ಚಂದ್ರಶೇಖರ ಅಧ್ಯಕ್ಷರಾಗಿ ಪುನಃ ಆಯ್ಕೆಯಾದರು.

ಪ್ರತಿ ಗ್ರಾಮ ಪಂಚಾಯ್ತಿಯಿಂದ ೨ ಜನರಂತೆ ೩೨ ಜನರ ಕಾರ್ಯಕಾರಿ ಮಂಡಳಿ ರಚಿಸಲಾಯಿತು. ಪದಾಧಿಕಾರಿಗಳು: ಮಳಿಗೆ ಚಂದ್ರಶೇಖರ್ (ಅಧ್ಯಕ್ಷ), ಕೆ. ವಿ. ಸುಬ್ಬರಾವ್ (ಉಪಾಧ್ಯಕ್ಷ), ಜಿ. ಡಿ. ಪರಮೇಶ್ವರ (ಮುಖ್ಯ ಕಾರ್ಯದರ್ಶಿ), ಎಸ್. ರಾಮಭಟ್ಟ (ಕಸಬಾ ಹೋಬಳಿ), ಕುಸುರ್ಗಿ ಕೃಷ್ಣೇಗೌಡ (ಹರಿಹರಪುರ) ಮತ್ತು ಬಿ. ರತ್ನಾಕರರಾವ್ (ಮೇಗುಂದ) (ಜಂಟಿ ಕಾರ್ಯದರ್ಶಿಗಳು). ಬಿ. ಎಸ್. ಶ್ರೀನಿವಾಸರಾವ (ಖಜಾಂಚಿ). [illegible] ಸಂಘದ [illegible] ಕ್ರಮಗಳನ್ನು ತಡೆಯಬೇಕೆಂದೂ [illegible] ಚಳುವಳಿ [illegible] ಲಾಯಿತು.

ತಾ||ಮಟ್ಟದ ಕೈಗಾರಿಕಾ ವಿಚಾರ ಸಂಕಿರಣ

ಕೊಪ್ಪ: ಇಲ್ಲಿನ ತಾ|| ಅ|| ಮಂಡಳಿ ಮತ್ತು ಜಿಲ್ಲಾ ಕೈಗಾರಿಕಾಕೇಂದ್ರ, ಉಪವಿಭಾಗ, ಚಿಕ್ಕಮಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ಮಾ. ೨೫ರಂದು ಕೊಪ್ಪ ತಾಲ್ಲೂಕು ಮಟ್ಟದ ಕೈಗಾರಿಕಾ ವಿಚಾರ ಸಂಕಿರಣವು ತಾ||ಅ||ಮಂ|| ಆವರಣದಲ್ಲಿ ನಡೆಯಿತು. ಪಿ. ಜಿ. ಗುರ್ಜರ್ ಅಧ್ಯಕ್ಷತೆಯಲ್ಲಿ ಬಿ. ಜಿ. ಚಿದಂಬರ್ ಸಂಕಿರಣ ಉದ್ಘಾಟಿಸಿದರು. ಜಿಲ್ಲಾ ಕೈಗಾರಿಕಾ ಕೇಂದ್ರದ ಮಹಾ ಕಾರ್ಯ ನಿರ್ವಾಹಕ ಜಿ. ಶ್ರೀ. ಸಾಂಬಶಿವಮೂರ್ತಿ ಮುಖ್ಯ ಅತಿಥಿಗಳಾಗಿದ್ದರು. ತಾಲ್ಲೂಕಿನ ಕೈಗಾರಿಕಾ ವಿಕಾಸಕ್ಕೆ ಕಿರು [illegible] ಹೊತ್ತಿಗೆಯನ್ನು [illegible] ತಾ|| [illegible] ಬಿಡುಗಡೆ ಮಾಡಿದರು.

[illegible] ಸ್ವಾಗತಿಸಿ, ಎಸ್. [illegible] ವಂದಿಸಿದರು. ಈ ಸಂದರ್ಭದಲ್ಲಿ [illegible] ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಕಮ್ಯುನಿಸ್ಟ್‌ರಿಗೆ ಗೆಲುವು

ಶೃಂಗೇರಿ: ಇಲ್ಲಿ ಏ. ೩ರಂದು ನಡೆದ [illegible] ಫೈನಲ್ ಪಂದ್ಯದಲ್ಲಿ [illegible]

ಶೃಂಗೇರಿ ಭೂ ಅಭಿವೃದ್ಧಿ ಬ್ಯಾಂಕಿನಿಂದ ಕಳೆದೆರಡು ವರ್ಷದಲ್ಲಿ

೨೫ ಲಕ್ಷ ರೂ. ಸಾಲ ವಿತರಣೆ

ಶೃಂಗೇರಿ: ಇಲ್ಲಿನ ಭೂ ಅಭಿವೃದ್ಧಿ ಬ್ಯಾಂಕ್ ಕಳೆದ ಎರಡು ವರ್ಷಗಳಲ್ಲಿ ರೈತರ ವಿವಿಧ ಯೋಜನೆಗಳಿಗಾಗಿ ೨೫ ಲಕ್ಷ ರೂ. ಗಳಷ್ಟು ಸಾಲ ವಿತರಣೆ ಮಾಡಿದೆ. ಈವರೆಗೆ ಸುಮಾರು ೧೦೦ ಜೊತೆ ಗಾಡಿ, ಗಾಡಿ–ಎತ್ತುಗಳಿಗಾಗಿ, ಹಾಗೂ ೫೯ ಪವರ್ ಟಿಲ್ಲರ್‌ಗಳಿಗಾಗಿ ಸಾಲ ಕೊಟ್ಟಿದ್ದು, ೧೯೮೧–೮೨ರ ಒಂದೇ ವರ್ಷ ೧೫ ಟಿಲ್ಲರ್‌ಗಳಿಗೆ ಹಣಕಾಸು ಒದಗಿಸಿ ತನ್ನ ಇತಿಹಾಸದಲ್ಲೇ ದಾಖಲೆ ಸ್ಥಾಪಿಸಿಕೊಂಡಿದೆ. ಇದಲ್ಲದೆ ತಂತಿ ಬೇಲಿ, ಮನೆ, ದನದ ಕೊಟ್ಟಿಗೆ, ಹಂದಿ ಸಾಕಣೆ, ಜಮೀನು ಸಮತಟ್ಟು, ಬಾವಿ, ಪಂಪ್‌ಸೆಟ್, ಸ್ಪ್ರಿಂಕ್ಲರ್, ಅಡಿಕೆ ತೋಟ ಅಭಿವೃದ್ಧಿ, ಕಾಫಿ–ಹೀಗೆ ಹಲವು ಹತ್ತು ಯೋಜನೆಗಳಿಗೆ ಹಣಕಾಸು ಒದಗಿಸಿದೆ.

ಈ ವಿವರಗಳನ್ನು ಬ್ಯಾಂಕ್ ಈಚೆಗೆ ಹೊರಡಿಸಿದ ಪ್ರಗತಿಯ ಸಂಕ್ಷಿಪ್ತ ಪರಿಚಯದಲ್ಲಿ ತಿಳಿಸಲಾಗಿದೆ.

ಶೃಂಗೇರಿ ತಾ|| ವ್ಯಾಪ್ತಿಯಲ್ಲಿ, ೨,೩೦೦ ಜನ ಸದಸ್ಯರಿರುವ ಈ ಬ್ಯಾಂಕ್ ಸಾಲ ವಸೂಲಾತಿಯಲ್ಲಿ ಜಿಲ್ಲೆಗೆ ೨ನೇ ಸ್ಥಾನ ಪಡೆದಿದ್ದು, ೧೯೮೧–೮೨ರಲ್ಲಿ ೫೫ ಸಾವಿರ ರೂ. ಲಾಭಗಳಿಸಿದೆ ಹಾಗೂ ೮೨-೮೩ರ ಸಾಲಿಗೂ ಲಾಭದ ನಿರೀಕ್ಷೆಯಲ್ಲಿದೆ. ೮೧-೮೨ಕ್ಕೆ ನೌಕರರಿಗೆ ಶೇ. ೧೫ರ ಬೋನಸ್ ನೀಡಿದೆ. ಶೇರುದಾರರಿಗೆ ಲಾಭಾಂಶ ನೀಡುವ ಬಗ್ಗೆ ಮುಂದಿನ ಮಹಾಸಭೆಯಲ್ಲಿ ಅನುಮತಿ ಪಡೆಯಲಾಗುವುದು.

ಶಾಂತಿಗ್ರಾಮದಲ್ಲಿ ಅಂಗನವಾಡಿ ಉದ್ಘಾಟನೆ

ಕೊಗ್ರೆ: ಇಲ್ಲಿನ ದುರ್ಗಾಂಬ ಮಹಿಳಾ ಸಮಾಜದಲ್ಲಿ ಅಂಗನವಾಡಿಯ ಉದ್ಘಾಟನೆಯನ್ನು ಮಾ. ೨೮ರಂದು ಜಿಂ. ಸದಸ್ಯ ಎಸ್.ಪಿ. ಶ್ರೀಪಾಲ ನೆರವೇರಿಸಿದರು. ಜೆ.ಕೆ. ಸರಸ್ವತಿ ಅಧ್ಯಕ್ಷತೆ ವಹಿಸಿದ್ದು ಅಧ್ಯಾಪಕ ಶಿವಪ್ಪ ಮುಖ್ಯ ಅತಿಥಿಗಳಾಗಿದ್ದರು. ಕೆ. ಪಿ. ಗಾಯತ್ರಿ ಸ್ವಾಗತಿಸಿ, ಸಾವಿತ್ರಮ್ಮ ವಂದಿಸಿದರು.

ಅಂಗನವಾಡಿಗೆ ಶಿಕ್ಷಕಿಯ ನೇಮಕವಾಗಿದ್ದು ಸುಮಾರು ೩೫ ಮಕ್ಕಳು ಆಯ್ಕೆಯಾಗಿದ್ದಾರೆ.

ಮಹಿಳಾ ಸಮಾಜದ ವಾರ್ಷಿಕೋತ್ಸವದ ಅಂಗವಾಗಿ ಏರ್ಪಡಿಸಿದ್ದ ಲಾಟರಿ ಯೋಜನೆಯ ಡ್ರಾ ಮಾ. ೨೫ರಂದು ನಡೆಯಿತು. (ವರದಿ: ಕೆ.ಪಿ. ಗಾಯತ್ರಿ)

ಗ್ರಾಮ ಮಟ್ಟದ ಜನತಾ ಪಕ್ಷದ ಸಭೆ: ನಿರ್ಣಯಗಳು

ಅಸಗೋಡು: ಮಾ. ೧೯ರಂದು ಇಲ್ಲಿ ನಡೆದ ಅಸಗೋಡು ಪಂಚಾಯ್ತಿ ಮಟ್ಟದ ಜನತಾ ಪಕ್ಷದ ಕಾರ್ಯಕಾರಿಸಮಿತಿ ಸಭೆಯಲ್ಲಿ ಈ ಕೆಳಕಂಡ ಸಮಸ್ಯೆಗಳ ಬಗ್ಗೆ ನಿರ್ಣಯ ಮಾಡಲಾಯಿತು:

(೧) ಮೇಲುಬೆಳ್ಳಿ ಗ್ರಾಮದ ಸ. ನಂ. ೧೯೯ರ ತರಿ ಜಮೀನಿಗೆ ಮಳೆಗಾಲದ ಸಾಗುವಳಿಗೆ ಹೋಗಲು ಮತ್ತು ಗಾಡಿಹೊಡೆಯಲು ಅಡ್ಡವಾಗಿರುವ ಹಳ್ಳಕ್ಕೆ ಕಾಲುಸಂಕ ಮಾಡಿಸುವಂತೆ ಸರ್ಕಾರವನ್ನು ವಿನಂತಿಸುವುದು; (೨) ಸುಮಾರು ೨೦ ಎಕ್ರೆ ತರಿ ಜಮೀನಿಗೆ ನೀರು ಒದಗಿಸಬಲ್ಲ ಮಾಕೋಡು ಹಳ್ಳ ಅಣೆಕಟ್ಟು ನಿರ್ಮಿಸಲು ಲೋಕೋಪಯೋಗಿ ಇಲಾಖೆಗೆ ಮನವಿ; (೩) ತಮ್ಮಡವಳ್ಳಿ ಗ್ರಾಮ ಮತ್ತು ಮುಗುಳುವಳ್ಳಿ ಅಗ್ರಹಾರಗಳ ನಡುವೆ ಜಮೀನು ಬೇಸಾಯಕ್ಕಾಗಿ ಓಡಾಟ ಹಾಗೂ ಸಾರ್ವಜನಿಕರ ಸಂಚಾರಕ್ಕೆ ಅನುಕೂಲ ಕಲ್ಪಿಸಲು ಅಲ್ಲಿ ಅಡ್ಡಲಾಗಿರುವ ಹಳ್ಳಕ್ಕೆ ಒಂದು ಸೇತುವೆ ನಿರ್ಮಿಸಲು ಲೋಕೋಪಯೋಗಿ ಇಲಾಖೆಯನ್ನು ಕೋರುವುದು.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ:
ಸಿರಿಮನೆ ನಾಗರಾಜ್.
ಅಚ್ಚು : ದೀಪಟಿಗೆ ಅಚ್ಚುಕೂಟ, ಕೊಪ್ಪ

ಅರಣ್ಯ ಲಿಪಿಕ ನೌಕರರ ಸಭೆ, ಹೋರಾಟ ಸಮಿತಿ

ಕೊಪ್ಪ: ಮಾ. ೨೭ರಂದು ಇಲ್ಲಿ ಶಿವಮೊಗ್ಗ ಮತ್ತು ವರಾಹಿ ವೃತ್ತಗಳ ಅರಣ್ಯ ಲಿಪಿಕ ನೌಕರರು ಸಭೆ ಸೇರಿ ತಮ್ಮ ಕುಂದುಕೊರತೆಗಳ ಬಗ್ಗೆ ಚರ್ಚಿಸಿದರು. ಬೆಂಗಳೂರು ಅ. ಲಿ. ನೌ. ಸಂಘದ ಅಧ್ಯಕ್ಷ, ಕಾರ್ಯದರ್ಶಿಗಳೂ ಭಾಗವಹಿಸಿದ್ದರು. ಬೇಡಿಕೆಗಳ ಶೀಘ್ರ ಇತ್ಯರ್ಥಕ್ಕಾಗಿ ಒತ್ತಾಯಿಸಿ ಇಲಾಖಾ ಮುಖ್ಯರಿಗೂ ಅರಣ್ಯ ಸಚಿವರಿಗೂ ಮನವಿ ಸಲ್ಲಿಸಲು ತೀರ್ಮಾನಿಸಲಾಯಿತಲ್ಲದೆ ಈ ಬಗ್ಗೆ ಒಂದು 'ಹೋರಾಟ ಸಮಿತಿ' ರಚಿಸಲಾಯಿತು.

ವಾರ್ಷಿಕೋತ್ಸವಗಳು

ಸರ್ವೋದಯ ಯುವಕ ಸಂಘ

ಕೊಪ್ಪ ಬಾಳಗಡಿಯ ಸರ್ವೋದಯ ಯುವಕ ಸಂಘದ ವಾರ್ಷಿಕೋತ್ಸವ ಮಾ. ೨೭ರಂದು ಲೋಕೋಪಯೋಗಿ ಇಲಾಖೆ ಇಂ|| ಕೆ. ವಿ. ವೆಂಕಟಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಿರಿಯ ಕಾಲೇಜು ಉಪನ್ಯಾಸಕ ಟಿ. ಎಸ್. ವಿಶ್ವೇಶ್ವರ, ತಾ|| ಯುವಜನ ಒಕ್ಕೂಟದ ಅಧ್ಯಕ್ಷ ಹೆಚ್. ಎಸ್. ಜಯಪ್ರಕಾಶ್ ಮುಖ್ಯ ಅತಿಥಿಗಳಾಗಿದ್ದರು.

ಮನರಂಜನಾ ಕಾರ್ಯಕ್ರಮಗಳೇ ಮುಖ್ಯ ಆಕರ್ಷಣೆಯಾಗಿದ್ದ ಈ ಸಮಾರಂಭದಲ್ಲಿ ಡಿಸ್ಕೋ, ಕೆಲವು ಮಿಮಿಕ್ರಿಗಳನ್ನು ಬಿಟ್ಟರೆ ಉಳಿದವು ಉತ್ತಮವಾಗೇ ಮೂಡಿಬಂದವು. "ಗಲಾಟೆ ಕಲ್ಯಾಣ" ನಾಟಕದಲ್ಲಿ ಅಭಿನಯ ಉತ್ತಮವಾಗಿತ್ತಾದರೂ ಸದಸ್ಯರು ನಾಟಕದ ಆಯ್ಕೆಯಲ್ಲಿ ವಿಫಲರಾದರೆಂದೆನಿಸಿತು. (ವರದಿ: ಮಾ. ಶೀ. ಗಣಪತಿ)

ಕೊಪ್ಪ: ಇಲ್ಲಿನ ಪ್ರಬೋಧಿನಿ ಶಿಶುಮಂದಿರದ ವಾರ್ಷಿಕೋತ್ಸವ ಮಾ. ೨೭ರಂದು ಕೆ. ಸುಂದರನಾಯ್ಕ್ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಮತಿ ಅನಸೂಯ ನಾಗಪ್ಪ ಮಕ್ಕಳಿಗೆ ಬಹುಮಾನ ಹಂಚಿದರು. ಪುಟ್ಟ ಮಕ್ಕಳು ಸಭಾಕಂಪನವಿಲ್ಲದೆ, ತಮ್ಮದೇ ಭಂಗಿಗಳಲ್ಲಿ ಸಂಗೀತ, ನೃತ್ಯ, ಕೋಲಾಟ ಮುಂತಾದವುಗಳಲ್ಲಿ ಭಾಗವಹಿಸಿದ್ದು ಮೋಹಕವಾಗಿತ್ತು.

ಸಾಕ್ಷಿ ಹೇಳಿದ್ದಕ್ಕೆ ಚಪ್ಪಲಿ ಏಟು!

ಜಯಪುರ: ಹುಲಿಗರಡಿ ಗ್ರಾಮದ ಸ. ನಂ. ೧೪೪ರಲ್ಲಿನ ದರ್ಖಾಸ್ತು ಜಮೀನೊಂದರ ಬಗ್ಗೆ ನ.ರಾ.ಪುರ ಕೋರ್ಟಿನಲ್ಲಿರುವ ವಿವಾದವೊಂದರಲ್ಲಿ ಸಾಕ್ಷಿ ಹೇಳಲು ಹೋಗಿದ್ದಕ್ಕಾಗಿ ಹರಕೋಡಿನ ಮಂಜಪ್ಪಯ್ಯ ಎಂಬವರಿಗೆ ಕೂಸೂರು ಗ್ರಾಮದ ಹೆಗ್ಗದ್ದೆಯ ತಮ್ಮಯ್ಯಗೌಡ ಎಂಬುವರು ಈಚೆಗೆ ಜಯಪುರ ಬಸ್ ನಿಲ್ದಾಣದಲ್ಲಿ ಚಪ್ಪಲಿಯಲ್ಲಿ ಹೊಡೆದಿರುವುದಾಗಿ ವರದಿಯಾಗಿದ್ದು, ಈ ಬಗ್ಗೆ ಮಂಜಪ್ಪಯ್ಯ ಅವರು ನೀಡಿದ ದೂರಿನಮೇಲೆ ಶೃಂಗೇರಿ ಪೋಲೀಸರು ಕ್ರಮ ತೆಗೆದುಕೊಂಡಿರುವುದಾಗಿ ತಿಳಿದುಬಂದಿದೆ. ಮುಂದೆ ಪುನಃ ಸಾಕ್ಷಿ ಹೇಳದಂತೆ ಕೊಲೆ ಬೆದರಿಕೆಯನ್ನೂ ಹಾಕಲಾಗಿದೆಯೆಂದೂ, ಅವರ ಬಳಗದವರಿಗೆಲ್ಲ "ಜಯಪುರಕ್ಕೆ ಬಂದರೆ ಕಾಲು ಮುರಿಯುವ" ಬೆದರಿಕೆ ಹಾಕಲಾಗುತ್ತಿದೆಯೆಂದೂ ದೂರಲಾಗಿದೆ.

ಅಂಚೆ ನೌಕರರ ಸಮ್ಮೇಳನ

ಕೊಪ್ಪ ಮುಖ್ಯ ಅಂಚೆ ಕಚೇರಿ ಶಾಖೆಯ ಅಂಚೆ ನೌಕರರ ಜಂಟಿ ಸಮ್ಮೇಳನ–ಏಪ್ರಿಲ್ ೧೦. ಮುಖ್ಯ ಅತಿಥಿಗಳು: ಶಾಸಕ ಹೆಚ್. ಜಿ. ಗೋವಿಂದಗೌಡ. ಅಂಚೆ ನೌಕರರ ಸಂಘದ ಕರ್ನಾಟಕ ವಲಯ ಮತ್ತು ಚಿಕ್ಕಮಗಳೂರು ವಿಭಾಗೀಯ ಮುಖಂಡರು ಭಾಗವಹಿಸುತ್ತಾರೆ.

ರಥೋತ್ಸವಗಳು

ನ. ರಾ. ಪುರದ ಸಿಂಹನಗದ್ದೆಯಲ್ಲಿ: ಏಪ್ರಿಲ್ ೬.

ಕೊಪ್ಪದ ಗುತ್ತಿದೇವಸ್ಥಾನದಲ್ಲಿ: ಏಪ್ರಿಲ್ ೧೯.

ಅಗಳಗಂಡಿಗೆ ದೂರವಾಣಿ ಕೇಂದ್ರ

(ವರದಿ: ಕಲಬಿ ಶ್ರೀನಿವಾಸ್)

ಅಗಳಗಂಡಿ: ಇಲ್ಲಿನ ೨೫ ಲೈನುಗಳ ದೂರವಾಣಿ ಕೇಂದ್ರ ಸಮೀಪದ ಕಚೇರಿಯಲ್ಲಿ ನಿರ್ಮಿತವಾಗಿರುವ ನೂತನ ಕಟ್ಟಡದಲ್ಲಿ ಮಾ. ೨೮ರಂದು ಆರಂಭಿಸಲ್ಪಟ್ಟಿತು. ಹಾಸನ ವಿಭಾಗ ಇಂಜಿನಿಯರ್ ಎಲ್. ಜಿ. ಕಡ್ನಿಯವರ ಅಧ್ಯಕ್ಷತೆಯಲ್ಲಿ ಮಂಗಳೂರು ಏರಿಯಾ ಮ್ಯಾನೇಜರ್ ಹೆಚ್. ವಿ. ಭಟ್ ಉದ್ಘಾಟನೆ ಮಾಡಿದರು. ವೈ.ಎಂ. ಸುರೇಂದ್ರ ಫೋನ್ ಬಳಕೆದಾರರ ಪರವಾಗಿ ಮಾತನಾಡಿದರು.

ಕೇಂದ್ರಕ್ಕೆ ಸುಮಾರು ೩ ಲಕ್ಷ ರೂ. ವೆಚ್ಚವಾಗಿದ್ದು ಹಾಲಿ ೧೦ ಮನೆಗಳವರು ಫೋನ್ ಸಂಪರ್ಕ ಪಡೆದಿದ್ದಾರೆ.